**<u>ಸಾಕ್ಷಿಗೆ ದಿನಾಂಕ *03-06-2024* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು:</u> ಪ್ರತಿವಾದಿಯರ ಪರ ಶ್ರೀ ವಿ. ಬಿ. ಡಿ. ವಕೀಲರಿಂದ.**

2 ನೇ ವಾದಿಯು ನನ್ನ ದೊಡ್ಡಮ್ಮ ಆಗಬೇಕು. ಚನ್ನಪ್ಪ ಮತ್ತು ರುದ್ರವ್ವ ರವರ ಪಾಲಿಗೆ ಸರ್ವೆ ನಂ. 188 ಬಂದಿದ್ದು, ಅದರ ಕ್ಷೇತ್ರ 16 ಎಕರೆ 2 ಗುಂಟೆ ಇತ್ತು. ಸದರಿ ಕ್ಷೇತ್ರ 16 ಎಕರೆ 2 ಗುಂಟೆಯಲ್ಲಿ 8 ಎಕರೆ 2 ಗುಂಟೆ ಬೈಲಪ್ಪವರಿಗೆ ಬಂದಿದ್ದು ಮತ್ತು ಉಳಿದ 8 ಎಕರೆ ಚನ್ನಪ್ಪ ಮತ್ತು ರುದ್ರವ್ವ ರವರ ಹೆಸರಿನಲ್ಲಿ ಇತ್ತು ಅಂದರೆ ಸರಿಯಲ್ಲ. ನಾನು 2015 ರಲ್ಲಿ ಸರ್ವೇ ನಂ. 188 ರಲ್ಲಿ 16 ಎಕರೆ 2 ಗುಂಟೆ ಇರುವ ಬಗ್ಗೆ ನಾನು ನೋಡಿರುತ್ತೇನೆ. 1981 ರಲ್ಲಿ ಚನ್ನಪ್ಪ, ರುದ್ರವ್ವ ಮತ್ತು ಬೈಲಪ್ಪ ರವರ ನಡುವೆ ಪಾಲು ವಾಟ್ನಿ ಆಗಿದ್ದು ಮತ್ತು ಆಗ ಉತಾರೆಗಳು ಬೇರೆ ಬೇರೆ ಆಗಿದ್ದು, ಈ ವಿಷಯ ನನಗೆ ಮತ್ತು ನನ್ನ ತಂದೆಗೆ ಗೊತ್ತಿದ್ದರೂ ಕೂಡಾ ಇಲ್ಲ ಎಂದುಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸರ್ವೆ ನಂ. 188 ಕ್ಕೆ ಸಂಬಂಧ ಪಟ್ಟಂತೆ ಉತಾರೆಗಳನ್ನು ಹಾಜರು ಪಡಿಸುವಾಗ ಅವುಗಳು ಪ್ರತಿವಾದಿಗಳು ಮತ್ತು ನನ್ನ ಹೆಸರಿನಲ್ಲಿ ಇದ್ದವು. ನನ್ನ ಹೆಸರಿನಲ್ಲಿ 8 ಎಕರೆ 2 ಗುಂಟೆ ಇದ್ದು, ಅದರ ಸರ್ವೆ ನಂ. 188/3 ಎಂದು ಇರುತ್ತದೆ. 2001 ರಲ್ಲಿ 2 ನೇ ವಾದಿಯು ನನಗೆ 8 ಎಕರೆ 2 ಗುಂಟೆ ಕ್ಷೇತ್ರವನ್ನು ಬಿಟ್ಟುಕೊಟ್ಟಿರುತ್ತಾರೆ.

ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಸಾಕ್ಷಿದಾರರಿಗೆ ಎಮ್.ಆರ್.ನಂ.24/2009-2010 ನ್ನು ಮತ್ತು ಸರ್ವೆ ನಂ. 188/3 ಇದರ ಪಹಣಿ ಪತ್ರಿಕೆಯನ್ನು ತೋರಿಸಿದ್ದು ಸಾಕ್ಷಿದಾರರು ಸದರಿ ಎರಡು ದಾಖಲೆಗಳನ್ನು ನೋಡಿ ಗುರುತಿಸಿದ್ದರಿಂದ , ಅವುಗಳನ್ನು ಕ್ರಮವಾಗಿ ನಿಡಿ-1 ಮತ್ತು ನಿಡಿ-2 ಎಂದು ಗುರುತಿಸಲಾಯಿತು.

ಸದರಿ ಸರ್ವೆ ನಂ. 188/3 ರ ಮೇಲೆ ನಾನು ಮತ್ತು ನನ್ನ ತಂದೆ ಸಾಲವನ್ನು ತೆಗೆದುಕೊಂಡಿರುತ್ತೇವೆ. ನಾನು 2015 ರಲ್ಲಿ ಸಾಲವನ್ನು ತೆಗೆದುಕೊಂಡಿರುತ್ತೇವೆ. ನಾವು 2015 ಕ್ಕಿಂತ ಮೊದಲು ಸಾಲವನ್ನು ತೆಗೆದುಕೊಂಡಿದ್ದೇವೆ ಎಂದರೆ ಸಾಕ್ಷಿದಾರರು ನಾವು ಉತಾರೆಯನ್ನು ತೆಗೆದುಕೊಂಡಿರುತ್ತೆವೆ ಎಂದು ಬರೆಸಿದ್ದು ಮತ್ತು 2015 ರ ನಂತರ ಸಾಲ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾರೆ. ನಾವು 2015 ರಲ್ಲಿ ಸಾಲ ತೆಗೆದುಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೈಲಪ್ಪರವರು ತೀರಿಕೊಂಡ ನಂತರ ಅವರ ಮಗ ಅಮರೇಶ ಮತ್ತು ಅವರ ತಮ್ಮನ ಮಗ ಮರಿಬಸಪ್ಪರವರು ತಮ್ಮ ತಮ್ಮ ಮಧ್ಯ ಪಾಲು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 1981 ರಿಂದ 8 ಎಕರೆ 2 ಗುಂಟೆ ಕ್ಷೇತ್ರದಲ್ಲಿ ಬೈಲಪ್ಪರವರು ಮತ್ತು ಅವರ ಮರಣಾ ನಂತರ ಪ್ರತಿವಾದಿಗಳು ಸದರಿ ಕ್ಷೇತ್ರದ ಕಬ್ಜಾದಲ್ಲಿ ಇರುತ್ತಿದ್ದಾರೆ ಅಂದರೆ ಸಾಕ್ಷಿದಾರರು 2019 ರ ವರೆಗೆ ನಾನು ಸದರಿ ಕ್ಷೇತ್ರದ ಕಬ್ಜಾ ದಲ್ಲಿ ಇದ್ದು ಮತ್ತು 2019 ರಲ್ಲಿ ಪ್ರತಿವಾದಿಗಳು ಸದರಿ ಕ್ಷೇತ್ರದ ಕಬ್ಜಾವನ್ನು ತೆಗೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. 2019 ರ ವರೆಗೆ ನಾನು ಕಬ್ಜಾ ದಲ್ಲಿ ಇದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯನ್ನು ದಾಖಲು ಮಾಡಲು ನಿರ್ದಿಷ್ಟ ಕೋರ್ಟ ಫೀಯನ್ನು ತುಂಬಿರುವುದಿಲ್ಲ ಅಂದರೆ ಸರಿಯಲ್ಲ. ಡ.ನಂ. 1105 ನನ್ನ ಮೇಲೆ ಬಂಧನಕಾರಿ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಹೊರಟಿದ್ದು ನಾವು ಅದನ್ನು ಎತ್ತಿಹಾಕಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆಯವರು ಬಂದರು ನಿಜಾಂಶ ಹೊರಗೆ ಬರುತ್ತದೆ ಎಂದು ನಾನು ಅವರಿಂದ ಜಿ .ಪಿ.ಎ ಎನ್ನು ಪಡೆದುಕೊಂಡು ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ

ದಾವೆಯನ್ನು ಮಾಡುವ ಮೊದಲು ಮಾನ್ನ ಪ್ರಧಾನ ದಿವಾಣಿ ನ್ಯಾಯಾಲಯದಲ್ಲಿ ಮೂಲ ದಾವಾ ನಂ. 219/2015 ಎಂದು ದಾಖಲಾಗಿದ್ದು, ನಾನು ಅದರಲ್ಲಿ ಸಾಕ್ಷಿ ಹೇಳಿರುತ್ತೇನೆ. ಆ ದಾವೆಯಲ್ಲಿ ನನ್ನನ್ನು ಪಾಟೀ ಸವಾಲು ಮಾಡಿರುತ್ತಾರೆ. ನಾನು ಅದಕ್ಕೆ ವ್ಯತಿರಿಕ್ತವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಸಾಕ್ಷಿದಾರರಿಗೆ ಮೂಲ ದಾವಾ ನಂ.219/2015 ರಲ್ಲಿ ಸಲ್ಲಿಸಿದ ಪ್ರಮಾಣ ಪತ್ರ ಮತ್ತು ಪಾಟೀಸವಾಲಿನ ಭಾಗವನ್ನು ತೋರಿಸಿದ್ದು, ಸಾಕ್ಷಿದಾರರು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-3 ಎಂದು ಗುರುತಿಸಲಾಯಿತು.

ಸರ್ವೆ ನಂ. 188/1 ಮತ್ತು ಸರ್ವೆ ನಂ. 188/2 ಕ್ಷೇತ್ರ 8 ಎಕರೆ ಇದು ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸರ್ವೇ ನಂ. 188/1 ಮತ್ತು 188/2 ರ ಕಬ್ಜಾದಲ್ಲಿ ಪ್ರತಿವಾದಿಗಳು ಇದ್ದು, ಹೀಗಾಗಿ ದಾವೆಯನ್ನು ದಾಖಲು ಮಾಡಲು ಯಾವುದೇ ಸಕಾರಣಗಳು ಇರುವುದಿಲ್ಲ ಅಂದರೆ ಸರಿಯಲ್ಲ. ಡ.ನಂ.1105, 1981 ರಲ್ಲಿ ಆಗಿದ್ದು, ಈ ವಿಷಯ ನನಗೆ, ನನ್ನ ತಂದೆಗೆ ಮತ್ತು 2 ನೇ ವಾದಿಗೆ ಗೊತ್ತಿದ್ದರೂ ಕೂಡಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರು ಉತಾರೆಯಲ್ಲಿ ಬಂದಿರುವುದನ್ನು ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ನಾನು ಆಸ್ತಿಯನ್ನು ಎತ್ತಿ ಹಾಕಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಮತ್ತು ವಾದ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು, ಹುನಗುಂದ.